ಸಿಸಿ ನಂಃ2629/2022

ಸಿ.ಡಬ್ಲೂ- 1/ಪಿ.ಡಬ್ಲೂ - 1

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 2629/2022**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸುರೇಶ ರೇವನಸಾ ಬದ್ದಿ |
| ತಂದೆಯ ಹೆಸರು | ಃ | ರೇವನಸಾ ಬದ್ದಿ |
| ವಯಸ್ಸು | ಃ | 44 ವರ್ಷ |
| ಉದ್ಯೋಗ | ಃ | ವ್ಯಾಪಾರ |
| ವಾಸ ಸ್ಥಳ | ಃ | ಧಾರವಾಡ |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 05-10-2024**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ದೂರನ್ನು ನಾನು ನೀಡಿರುತ್ತೇನೆ. ನಮ್ಮ ಮನೆ ಧಾರವಾಡದ ಯಾಲಕ್ಕಿ ಶೇಟ್ಟರ ಕಾಲೋನಿಯಲ್ಲಿ ಐಸಿಸಿ ಬ್ಯಾಂಕ ಬಾಜು ಇರುತ್ತದೆ. ಆರೋಪಿತರ ಮನೆ ನಮ್ಮ ಮನೆಯ ಬಾಜು ಇರುತ್ತದೆ. ಆರೋಪಿತರರನ್ನು ನೋಡಿದರೆ ಗುರುತಿಸರುತ್ತೇನೆ. ನ್ಯಾಯಾಲಯದ ಮುಂದೆರುವ ಆರೋಪಿತರು ಹಾಗೂ 2 ನೇ ಆರೋಪಿತ ಗೌಸ ಮಾದಿನ ನಮ್ಮ ಮನೆಯ ಹತ್ತಿರ ವಾಸಿಸುತ್ತಾರೆ. ಆರೋಪಿತರಿಗೆ ಮತ್ತು ನಮ್ಮ ಮನೆಗೆ ಹೋಗಲು ಇರುವ ಕಾಲು ದಾರಿಯಲ್ಲಿ ರಾಡ ಹಾಕಿ ಬಂದ ಮಾಡಿದ್ದರು. ದಾರಿ ಬಂದ ಮಾಡಿದ್ದ ಕಾರಣ ನಮಗೆ ಅಡ್ಡಾಡಲು ತೋಂದರೆ ಆಗುತ್ತಿತ್ತು. ಈ ಘಟನೆಯ ಕಾಲಕ್ಕೆ ಮುಂಚೆ ಆರೋಪಿತರು ನಮಗೆ ಏನು ಮಾಡಿರುವುದಿಲ್ಲ. ಜಾಗೆಯ ಕುರಿತು ಯಾವುದೇ ತಂಟೆ ತಕರಾರು ನಮಗೆ ಮತ್ತು ಆರೋಪಿತರಿಗೆ ಇರುವುದಿಲ್ಲ. ರಸ್ತೆಯಲ್ಲಿ ಹಾಕಿದ ಕಬ್ಬಿಣದ ರಾಡನ್ನು ನಾವು ತೆಗೆದು ಹಾಕಿದೇವು. ಅಂದಾಜು 2 ವರೆ ವರ್ಷಗಳ ಹಿಂದೆ ಮುಜಾನೆ 10.00 ಗಂಟೆಯ ಸುಮಾರಿಗೆ ಆಪ್ರಿನಾ ಹಾಗೂ ಆಕೆಯ ತಾಯಿ ಈ ಪ್ರಕರಣದ 4 ನೇ ಆರೋಪಿತಳು

ಸಿಸಿ ನಂಃ2629/2022
ಸಿ.ಡಬ್ಲೂ- 1/ಪಿ.ಡಬ್ಲೂ - 1

ಬಂದು ನಮಗೆ ಬೈದು ನಮ್ಮೊಂದಿಗೆ ಜಗಳವಾಡಿ ಹೇಲ್ಮಟ್ ನಿಂದ ನನಗೆ ಹಾಗೂ ಚಾಸಾ.8 ರವರಿಗೆ ಹೋಡೆದಿರುತ್ತಾರೆ. ಆದ ಕಾರಣ ನಾವು ಆರೋಪಿತರಿಗೆ ಹೋಡೆದಿರುತ್ತೆವೆ. ಆ ಕಾಲಕ್ಕೆ ಸಾರ್ವಜನಿಕರು ಮತ್ತು ನನಗೆ ಗೊತ್ತಿರುವವರು ಇರಲಿಲ್ಲ. ಬೇರೆ ಯಾರಿಗೂ ಏನು ಮಾಡಿರುವುದಿಲ್ಲ. ಆರೋಪಿತರು ಆ ಕಾಲಕ್ಕೆ ನಮ್ಮ ಮನೆಯ ಮೇಲೆ ಕಲ್ಲು ಏಸೆದಿರುತ್ತಾರೆ. ಹೇಲ್ಮಟ್ ನಿಂದ ಹೋಡೆದ ಕಾರಣ ನನಗೆ ತಲೆಯ ಹಿಂಬಾಗ ಪೆಟ್ಟಾಗಿತ್ತು ಹಾಗೂ ಚಾಸಾ.4 ರವರಿಗೆ ತಲೆಯ ಹಿಂಬಾಗ ಪೆಟ್ಟಾಗಿತ್ತು. ನಂತರ ಸ್ಥಳಕ್ಕೆ ಪೋಲೀಸರು ಬಂದಿದ್ದರು. ಅದೇ ದಿನ ಪೋಲೀಸ ದೂರು ನೀಡಿರುತ್ತೆನೆ. ದೂರನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ1(ಎ) ಎಂದು ಗುರುತಿಸಲಾಯಿತು. ಪೊಲೀಸರಿಗೆ ಘಟನಾ ಸ್ಥಳವನ್ನು ನಾನೇ ತೋರಿಸಿರುತ್ತೆನೆ. ಸ್ಥಳ ಪರೀಶಿಲನೆ ಮಾಡಿ ಪಂಚನಾಮೆಯನ್ನು ಮಾಡಿರುತ್ತಾರೆ. ಪಂಚನಾಮೆ 10.30 ರಿಂದ 11.30 ಗಂಟೆಯ ವರೆಗೆ ಮಾಡಿರುತ್ತಾರೆ. ಪೊಲೀಸರು ಸ್ಥಳದಲ್ಲಿದ್ದ ಕಬ್ಬಿಣದ ರಾಡು ಹಾಗೂ ಇಟ್ಟಂಗಿ ಜಪ್ತು ಮಾಡಿರುತ್ತಾರೆ. ಪೋಟೊವನ್ನು ಪಂಚನಾಮೆಯ ಕಾಲಕ್ಕೆ ತೆಗೆದಿರುತ್ತಾರೆ ಅದನ್ನು ನಿಪಿ.2 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಕೋರಿದ್ದರಿಂದ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.